190 (299) : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಜೋಯ್ಡಾ ತಾಲ್ಲೂಕಿನಿಂದ, ಅರಣ್ಯ ಸಂಪತ್ತು ಹೇರಳ ಪ್ರಮಾಣದಲ್ಲಿ ಲೂಟಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ಅರಣ್ಯ ಸಚಿವರು)–

ಅ) ಹೌದು. 2006–07ನೇ ಸಾಲಿನಲ್ಲಿ 18 ಗುನ್ನೆ ಪ್ರಕರಣಗಳು ಪತ್ತೆಯಾಗಿರುತ್ತದೆ.

ಆ) ಅರಣ್ಯ ಸಂಪತ್ತಿನ ಸಂರಕ್ಷಣಾ ದೃಷ್ಟಿಯಿಂದ ಅರಣ್ಯ ಕಳ್ಳತನ ತಡೆಯುವ ನಿಟ್ಟಿನಲ್ಲಿ ಆಯಾ ಕ್ಷೇತ್ರ ಸಿಬ್ಬಂದಿಯಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗಸ್ತು ಸಂಚರಣೆ ಮಾಡುತ್ತಿದ್ದು ಹಾಗೂ ರಾತ್ರಿ ಪಹರೆ ಕಾರ್ಯಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೇ ವಿವಿಧ ಯೋಜನೆಯಡಿಯಲ್ಲಿ ಅರಣ್ಯ ರಕ್ಷಣೆ ಬಗ್ಗೆ ಜನಸಾಮಾನ್ಯರಲ್ಲಿ ಗ್ರಾಮ ಅರಣ್ಯ ಸಮಿತಿಗಳ ಮುಖಾಂತರ ತಿಳುವಳಿಕೆ ನೀಡಲಾಗುತ್ತದೆ. ಹಾಗೂ ಅರಣ್ಯಗಳ್ಳತನ ಕಂಡುಬಂದಲ್ಲಿ ಕಾನೂನುರೀತ್ಯ ಕ್ರಮ ಜರುಗಿಸಲಾಗುತ್ತಿದೆ.

191 (300) : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ತಾಲ್ಲೂಕಿನ ಮಾಜಿ ಪಟೇಲರಿಗೆ ಬಾಕಿ ಇರುವ ಹಣವನ್ನು ಸಂದಾಯ ಮಾಡಬೇಕಾಗಿರುವುದು ನಿಜವೆ ;

ಆ) ಹಾಗಿದ್ದಲ್ಲಿ, ಯಾವಾಗ ಸಂದಾಯ ಮಾಡಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) –

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

192 (279) : ಶ್ರೀ ಗೋಪಾಲಪೂಜಾರಿ ಕೆ. (ಬೈಂದೂರು)– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?